•ಕೆಟಲಿಟಿಕ್ ಡೆವಲಪ್‌ಮೆಂಟ್ ಯೋಜನೆಗೆ ರಾಜ್ಯಪಾಲಿನ ಸಹಾಯಧನವಾಗಿ ರೂ. 270.00 ಲಕ್ಷ

ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆ

345 (824) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ಕಾರ್ಮಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪ್ರಸ್ತುತ ರಾಜ್ಯದಲ್ಲಿ ಉತ್ಪಾದಿಸುವ ಹಿಪ್ಪುನೇರಳೆ ರೇಷ್ಮೆಯ ಒಟ್ಟು ಪ್ರಮಾಣ ಎಷ್ಟು; ರೇಷ್ಮೆ ಕೃಷಿ ಪ್ರಮಾಣದಲ್ಲಿ ಇತ್ತೀಚಿನ ವರ್ಷಗಳಲ್ಲಿ ಇಳಿಕೆ ಕಂಡುಬರುತ್ತಿದೆಯೇ; ಹಾಗಿದ್ದಲ್ಲಿ ಕಾರಣಗಳೇನು;

ಆ) ರೇಷ್ಮೆ ಕೃಷಿಕರಿಗೆ ಒದಗಿಸಿ ಕೊಡುತ್ತಿರುವ ಮೂಲ ಸೌಲಭ್ಯಗಳು ಮತ್ತು ತಂತ್ರಜ್ಞಾನದ ಅಭಿವೃದ್ಧಿಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳಾವುವು;

ಇ) ರೇಷ್ಮೆ ಕೃಷಿ ಮತ್ತು ಪೂರಕ ವಲಯಗಳಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳೂ ಮತ್ತು ಕಾರ್ಮಿಕರುಗಳ ಸಂಖ್ಯೆ ಎಷ್ಟು?

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು):–

ಅ) ರಾಜ್ಯದ ಕಳೆದ 3 ವರ್ಷಗಳಲ್ಲಿ ಉತ್ಪಾದಿಸಿದ ರೇಷ್ಮೆಯ ಪ್ರಮಾಣ ಕೆಳಕಂಡಂತಿದೆ.

ವರ್ಷ	ಉತ್ಪಾದಿಸಿದ ರೇಷ್ಮೆಯ ಪ್ರಮಾಣ (ಮೆ.ಟನ್)
2008–09	7238
2009–10	7360
2010–11	7338

ಇತ್ತೀಚಿನ ವರ್ಷಗಳಲ್ಲಿ ರೇಷ್ಮೆ ಉತ್ಪಾದನೆ ಪ್ರಮಾಣ ಸ್ಥಿರವಾಗಿದೆ

ಆ) ರೇಷ್ಮೆ ಕೃಷಿಕರಿಗೆ ಒದಗಿಸಿಕೊಡುತ್ತಿರುವ ಮೂಲ ಸೌಲಭ್ಯಗಳು ಮತ್ತು ತಂತ್ರಜ್ಞಾನದ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳಲ್ಲಿ ನೀಡಲಾಗುತ್ತಿರುವ ಸಹಾಯ ಧನ/ಪ್ರೋತ್ಸಾಹ ಧನದ ವಿವರ ಕೆಳಕಂಡಂತಿದೆ.

I ಕೇಂದ್ರ ರೇಷ್ಮೆ ಮಂಡಳಿಯ ಆರ್ಥಿಕ ಸಹಯೋಗದ ಕೆಟಲಿಟಿಕ್ ಅಭಿವೃದ್ಧಿ ಯೋಜನೆ–ಸಾಮಾನ್ಯ

1. ಹೊಸತಳಿ ಹಿಪ್ಪುನೇರಳೆ ನಾಟಿಗೆ ಪ್ರತಿ ಎಕರೆಗೆ ರೂ. 4,125 ಗಳ ಪ್ರೊತ್ಸಾಹಧನ.
2. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಪ್ರತಿ ಹೆಕ್ಟೇರಿಗೆ ರೂ. 37,500ಗಳ ಸಹಾಯಧನ.
3. ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ 1000 ಚ.ಅ. ಮನೆಗೆ ರೂ. 75,000; 600 ಚದರ ಅಡಿ ಮನೆಗೆ ರೂ. 50,000; 375 ಚ.ಅ. ಮನೆಗೆ ರೂ. 25,000ಗಳ ಸಹಾಯಧನ.
4. ಚಾಕಿ ತೋಟ ನಿರ್ವಹಣೆ/ಚಾಕಿ ಸಾಕಾಣಿಕಾ ಕಟ್ಟಡ/ಚಾಕಿ ಸಾಕಾಣಿಕೆ ಸಲಕರಣೆಗಳ ಖರೀದಿಗೆ ರು. 1,72,500 ಗಳ ಸಹಾಯಧನ.
5. ಹುಳು ಸಾಕಾಣಿಕೆ ಸಲಕರಣೆಗಳ ಖರೀದಿಗೆ ರೂ. 30,000ಗಳ ಸಹಾಯಧನ.
6. ದ್ವಿತಳಿ ಬಿತ್ತನೆ ರೇಷ್ಮೆ ಬೆಳೆಗಾರರಿಗೆ ರೂ. 1,500/–ಮೌಲ್ಯದ ಸೋಂಕು ನಿವಾರಕಗಳ ಸರಬರಾಜು.

II ಕೇಂದ್ರ ರೇಷ್ಮೆ ಮಂಡಳಿಯ ಆರ್ಥಿಕ ಸಹಯೋಗದ ಕೆಟಲಿಟಿಕ್ ಅಭಿವೃದ್ಧಿ ಯೋಜನೆ–ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ

1. ಹೊಸತಳಿ ಹಿಪ್ಪುನೇರಳೆ ನಾಟಿಗೆ ಪ್ರತಿ ಎಕರೆಗೆ ರೂ. 7,500 ಗಳ ಪ್ರೊತ್ಸಾಹಧನ.
2. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಪ್ರತಿ ಹೆಕ್ಟೇರಿಗೆ ರೂ. 45,000ಗಳ ಸಹಾಯಧನ.
3. ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ರೂ. 1,23,000ಗಳ ಸಹಾಯಧನ.
4. ಹುಳು ಸಾಕಾಣಿಕೆ ಸಲಕರಣೆಗಳ ಖರೀದಿಗೆ ರೂ. 30,000ಗಳ ಸಹಾಯಧನ.

III ರೇಷ್ಮೆ ವರದಾನ ಯೋಜನೆ

1. ಹೊಸತಳಿ ಹಿಪ್ಪುನೇರಳೆ ನಾಟಿಗೆ ಪ್ರತಿ ಎಕರೆಗೆ ರೂ. 5,000 ಗಳ ಪ್ರೋತ್ಸಾಹಧನ
2. 2ನೇ ಹೆಕ್ಟೇರ್ ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ರೂ. 37,500ಗಳ ಸಹಾಯಧನ.
3. 2ನೇ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ 1000 ಚದರ ಅಡಿ ಮನೆಗೆ ರೂ.

75,000; 600 ಚದರ ಅಡಿ ಮನೆಗೆ ರೂ. 50,000; 375 ಚದರ ಅಡಿ ಮನೆಗೆ ರೂ. 25,000ಗಳ ಸಹಾಯಧನ.

4. ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ವಿಸ್ತೀರ್ಣದ ಅನುಗುಣವಾಗಿ ರೂ. 18000/ – ದಿಂದ ರೂ. 50,000/ಗಳ ಸಹಾಯಧನ.

IV ರೇಷ್ಮೆ ವರದಾನ ಯೋಜನೆ ವಿಶೇಷ ಘಟಕ ಯೋಜನೆ/ಗಿರಿಜನ ಉಪ ಯೋಜನೆ

1. ಹಿಪ್ಪುನೇರಳೆ ನರ್ಸರಿ ಬೆಳೆಸುವ ರೈತರಿಗೆ ರೂ. 75,000 ಗಳ ಸಹಾಯಧನ.
2. ಹಿಪ್ಪುನೇರಳೆ ವ್ಯವಸಾಯದಲ್ಲಿ ಯಾಂತ್ರೀಕರಣಕ್ಕಾಗಿ ರೂ. 75,000ಗಳ ಸಹಾಯಧನ.
3. ರೇಷ್ಮೆ ಹುಳು ಸಾಕಾಣಿಕೆಗೆ ಕಡಿಮೆ ವೆಚ್ಚದಲ್ಲಿ ನಿರ್ಮಿಸಿರುವ 20X30 ಶೆಡ್‌ಗೆ ರೂ. 15,000 ಹಾಗೂ 20X40 ಶೆಡ್‌ಗೆ ರೂ.22,500 ಗಳ ಸಹಾಯಧನ.
4. ಕೊಳವೆ ಬಾವಿ ಪುನಃಶ್ಚೇತನಕ್ಕೆ ರೂ. 22,500ಗಳ ಸಹಾಯಧನ
5. ಹಿಪ್ಪುನೇರಳೆ ತೋಟಕ್ಕೆ ಟ್ರೆಂಚಿಂಗ್, ಮಲ್ಚಿಂಗ್‌ಗಾಗಿ ರೂ. 22,500ಗಳ ಸಹಾಯಧನ.
6. ದ್ವಿತಳಿ ರೇಷ್ಮೆ ಗೂಡಿಗೆ ಪ್ರತಿ ಕೆ.ಜಿ.ಗೆ ರೂ. 40ಗಳ ಪ್ರೋತ್ಸಾಹಧನ

V ರೇಷ್ಮೆ ಹುಳು ಸಾಕಾಣಿಕೆ ಚಟುವಟಿಕೆ ಅಭಿವೃದ್ಧಿ

1. ಮೈಸೂರು ಶುದ್ಧ ತಳಿ ಬಿತ್ತನೆ ಗೂಡು ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆ ಇಲ್ಲದ ಕಾರಣ ನೂಲು ಬಿಚ್ಚಾಣಿಕೆಗೆ ಮಾರಾಟವಾದ ಪ್ರತಿ ಕೆ.ಜಿ.ಗೂಡಿಗೆ ರೂ. 100 ಗಳ ಬೋನಸ್.
2. ಹೊಸ ಪ್ರದೇಶದ ರೇಷ್ಮೆ ಗೂಡಿಗೆ ಪ್ರತಿ ಕೆ.ಜಿ.ಗೆ ಪುರುಷ ಹಾಗೂ ಮಹಿಳಾ ರೇಷ್ಮೆ ಬೆಳೆಗಾರರಿಗೆ ಕ್ರಮವಾಗಿ ರೂ. 10 ಹಾಗೂ ರೂ. 20ಗಳ ಪ್ರೋತ್ಸಾಹಧನ.

VI ರೇಷ್ಮೆ ಓಳು ಸಾಕಾಣಿಕೆ ಚಟುವಟಿಕೆ ಅಭಿವೃದ್ಧಿ ವಿಶೇಷ ಘಟಕ ಯೋಜನೆ/ಗಿರಿಜನ ಉಪ ಯೋಜನೆ.

1. ಮೈಸೂರು ಶುದ್ಧ ತಳಿ ಬಿತ್ತನೆ ಗೂಡು ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆ ಇಲ್ಲದ ಕಾರಣ ನೂಲು ಬಿಚ್ಚಾಣಿಕೆಗೆ ಮಾರಾಟವಾದ ಪ್ರತಿ ಕೆ.ಜಿ. ಗೂಡಿಗೆ ರೂ. 100ಗಳ ಬೋನಸ್.
2. ಹೊಸ ಪ್ರದೇಶದ ರೇಷ್ಮೆ ಗೂಡಿಗೆ ಪ್ರತಿ ಕೆ.ಜಿ.ಗೆ ಪುರುಷ ಹಾಗೂ ಮಹಿಳಾ ರೇಷ್ಮೆ ಬೆಳೆಗಾರರಿಗೆ ಕ್ರಮವಾಗಿ ರೂ. 15 ಹಾಗೂ ರೂ. 20 ಗಳ ಪ್ರೋತ್ಸಾಹಧನ.

3. ಶೇಕಡ 50ರ ದರದಲ್ಲಿ ಬಿದಿರಿನ ಚಂದ್ರಿಕೆಗಳ ಸರಬರಾಜು

VII ರೇಷ್ಮೆ ವ್ಯವಸಾಯ ಅಭಿವೃದ್ಧಿ ಕ್ಲಸ್ಟರ್

1. ಹಿಪ್ಪುನೇರಳೆ ವ್ಯವಸಾಯದಲ್ಲಿ ಯಾಂತ್ರೀಕರಣಕ್ಕಾಗಿ ರೂ. 50,000ಗಳ ಸಹಾಯಧನ.
2. ರೇಷ್ಮೆ ಹುಳು ಸಾಕಾಣಿಕೆಗೆ ಕಡಿಮೆ ವೆಚ್ಚದಲ್ಲಿ ನಿರ್ಮಿಸಿರುವ 20X30 ಶೆಡ್‌ಗೆ ರೂ. 10,000 ಹಾಗೂ 20X40 ಶೆಡ್‌ಗೆ ರೂ. 15,000ಗಳ ಸಹಾಯಧನ.
3. ದ್ವಿತಳಿ ರೇಷ್ಮೆ ಗೂಡಿಗೆ ಪ್ರತಿ ಕೆ.ಜಿ.ಗೆ ರೂ. 30ಗಳ ಪ್ರೋತ್ಸಾಹ ಧನ
4. ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ವಿಸ್ತೀರ್ಣಕ್ಕೆ ಅನುಗುಣವಾಗಿ ರೂ. 18,000 ದಿಂದ ರೂ. 50,000 ಗಳ ಸಹಾಯಧನ.

VIII ಬೈವೋಲ್ಟೈನ್ ಬಿತ್ತನೆ ಗೂಡು ಉತ್ತೇಜಕಗಳು

ನೂಲು ಬಿಚ್ಚಾಣಿಕೆಗೆ ವಿಲೇವಾರಿ ಆಗುವ ಉತ್ತಮ ಗುಣಮಟ್ಟದ ದ್ವಿತಳಿ ಬಿತ್ತನೆ ಗೂಡಿಗೆ ಪ್ರತಿ ಕೆ.ಜಿ.ಗೆ ರೂ. 100ಗಳ ಸಹಾಯಧನ.

IX ದ್ವಿತಳಿ ಚಾಕಿ ಸಾಕಾಣಿಕೆ ವೆಚ್ಚಗಳು

100 ದ್ವಿತಳಿ ಸಂಕರಣ ಮೊಟ್ಟೆ ಚಾಕಿ ಮಾಡಿಕೊಡಲು ರೂ. 750 ಗಳ ಸಹಾಯಧನ

X ರೇಷ್ಮೆ ಕೃಷಿ ಅಬಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ

ಈ ಕಾರ್ಯಕ್ರಮದಡಿ 2 ಎಕರೆಗಳವರೆಗೆ ಎರಡು ಕಂತುಗಳಲ್ಲಿ ರೂ. 10,000 ಸಹಾಯಧನ ಇತರೆ ಸೌಲಭ್ಯಗಳು

1. ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ ಮತ್ತು ಮಾರ್ಗದರ್ಶನ
2. ಉತ್ತಮ ಗುಣಮಟ್ಟದ ಮೊಟ್ಟೆಗಳ ಸರಬರಾಜು
3. ಬೆಳೆದ ಗೂಡುಗಳ ವಿಲೇವಾರಿಗಾಗಿ ಗೂಡು ಮಾರುಕಟ್ಟೆಗಳ ನಿರ್ವಹಣೆ
4. ರೇಷ್ಮೆ ವ್ಯವಸಾಯದ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಾಯ. ಇದಲ್ಲದೆ ಜಿಲ್ಲಾ/ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಡಿ ಹಿಪ್ಪುನೇರಳೆ ನಾಟಿಗೆ ಪ್ರೋತ್ಸಾಹಧನ, ಹುಳು ಸಾಕುವ ಸಲಕರಣೆಗಳಿಗೆ ಸಹಾಯಧನ, ಸೋಂಕು ನಿವಾರಕಗಳ ಸರಬರಾಜು ಮತ್ತು ಹುಳು ಸಾಕುವ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ.

ಇ) ರೇಷ್ಮೆ ಕೃಷಿ ಮತ್ತು ಪೂರಕ ವಲಯಗಳಲ್ಲಿ ಕಾರ್ಮಿಕರು ಸೇರಿದಂತೆ 9.257 ಲಕ್ಷ ಜನರು ತೊಡಗಿಸಿಕೊಂಡಿರುತ್ತಾರೆ.

ಸಣ್ಣ ನೀರಾವರಿ ಯೋಜನೆಗಳು

346 (825) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳುವ ಪ್ರದೇಶಗಳಲ್ಲಿ ಮಳೆ ನೀರು ಸಂಗ್ರಹಿಸುವ ಯೋಜನೆಗಳ ಮೂಲಕ ನೀರನ್ನು ಸಂಗ್ರಹಿಸಲು ಸರ್ಕಾರ ಅನುಷ್ಠಾನಗೊಳಿಸಿದ ಯೋಜನೆಗಳು ಯಾವುವು;

ಆ) ಭಾರೀ ಮಳೆ ಬೀಳುವ ಜಿಲ್ಲೆಗಳಾದ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಜಾರಿಗೊಳಿಸಿದ ನೀರು ಸಂಗ್ರಹಣಾ ಯೋಜನೆಗಳ ವಿವರಗಳೇನು;

ಇ) ಸದರಿ ಉದ್ದೇಶಗಳಿಗಾಗಿ ಸರ್ಕಾರವು ಹೊಸ ಯೋಜನೆಗಳನ್ನೇನಾದರೂ ರೂಪಿಸಿದೆಯೇ (ವಿವರಗಳನ್ನು ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳುವ ಪ್ರದೇಶವು ಸೇರಿದಂತೆ ಇನ್ನಿತರ ಪ್ರದೇಶಗಳಲ್ಲಿ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಮಳೆ ನೀರು ಸಂಗ್ರಹವಾಗುವ ಕೆರೆ, ಪಿಕಪ್, ಬಂದಾರ, ಬ್ಯಾರೇಜ್, ಚೆಕ್ ಡ್ಯಾಂನಂತಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಭಾರಿ ಮಳೆ ಬೀಳುವ ಜಿಲ್ಲೆಗಳಾದ ಉತ್ತರ ಕನ್ನಡ, ಕೊಡಗು, ದಕ್ಷಿಣ ಕನ್ನಡ, ಉಡುಪಿಗಳಲ್ಲಿ ನಿರ್ಮಿಸಿರುವ ಕಿಂಡಿ ಅಣೆಕಟ್ಟು, ಬಾಂದಾರ, ಪಿಕಪ್ ಇತ್ಯಾದಿ ಕಾಮಗಾರಿಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) 2011–12ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಹೊಸ ಕಾಮಗಾರಿಗಳ ವಿವರಗಳನ್ನು ಅನುಬಂಧ–2 ರಲ್ಲಿ ನಿಡಲಾಗಿದೆ.